ಎಕರೆ ವಿಸ್ತೀರ್ಣದ ಕೆರೆ ಕಾಯಕ ನಡೆಯಿತು. ಎರೆ ಮಣ್ಣಿನ ನೆಲೆಯ ಈ ಕೆರೆಯ ವಿಶೇಷವೆಂದರೆ ಒಮ್ಮೆ ಈ ತುಂಬಿದರೆ ಮೂರು ವರ್ಷ ಕುಡಿಯುವ ನೀರಿಗೆ ಸಮಸ್ಯೆಯಿಲ್ಲ. 2014ರಲ್ಲಿ ಕೆರೆ ತುಂಬಿತು, ಮುಂದಿನ ಮೂರು ವರ್ಷ ತೀವ್ರ ಬರ, ಮಳೆ ಸುರಿಯಲೇ ಇಲ್ಲ. ಆದರೆ ಕೆರೆ ನೀರು ಹಳ್ಳಿ ಉಳಿಸಿತು. ಒಂದೊಂದು ಕೆರೆಯಲ್ಲಿಯೂ ಊರಿನ ಕಥೆ, ವ್ಯಥೆಗಳಿವೆ. ಭಾವನಾತ್ಮಕ ಸಂಬಂಧಗಳಿವೆ. ಕೆರೆಗೆ ಮಳೆ ನೀರು ಸರಾಗ ಹರಿದು ಬರಲು ಕಾಲುವೆ ಮಾಡುವುದು, ದಂಡೆ ಕುಸಿಯದಂತೆ ಕಲ್ಲು ಕಟ್ಟುವುದು, ಕೋಡಿಗಳ ದುರಸ್ತಿ, ತೂಬುಗಳ ನಿರ್ವಹಣೆ, ದನಕರು ನುಗ್ಗದಂತೆ ಬೇಲಿ, ದಂಡೆಯಲ್ಲಿ ಮರಗಿಡ ಬೆಳೆಸುವುದು ಸೇರಿದಂತೆ ಆಯಾ ಕೆರೆಗೆ ತಕ್ಕ ಯೋಜನೆಯ ಕೆಲಸ ನಡೆಯುತ್ತದೆ.

ಹಾವೇರಿಯ ಗಣಜೂರಿನ ಕೆರೆ ಹೂಳು ತೆಗೆದು ವರದಾ ನದಿಯ ನೀರು ಭರ್ತಿ ಮಾಡಲಾಗುತ್ತಿದೆ. ಕುಡಿಯುವ ನೀರಿಗೆ ಸೋತ ಊರು ಖುಷಿಯಲ್ಲಿದೆ. ಧಾರವಾಡದ ಕುಂದಗೋಳದ ಶತಮಾನ ಹಿಂದಿನ ಅಗಸಿಹೊಂಡ, ಬೆಳಗಾವಿಯ ಸಿದ್ದನಬಾವಿ, ಬೆಂಗಳೂರು ನೆಲಮಂಗಲದ ಸಂಪಾಂಗಯ್ಯ ಕಟ್ಟಿಸಿದ ಪಾಳ್ಯದ ಕೆರೆ, ತುಮಕೂರಿನ ಶಿರಾ ತಾಲೂಕಿನ 600 ವರ್ಷ ಪುರಾತನ ದೊಡ್ಡಶೀಬಿ ಕೆರೆ, ಕೈವಾರ ತಾತಯ್ಯನ ಚಿಂತಾಮಣಿಯ ಗೂಡುಬಾವಿ, ಹೀಗೆ ರಾಜ್ಯದಲ್ಲಿ ನೂರಾರು ಕೆರೆಗಳು ಧರ್ಮಸ್ಥಳ ಸಂಸ್ಥೆಯಿಂದ ಮರುಜೀವ ಪಡೆದಿವೆ. ಕಸ ಚೆಲ್ಲುತ್ತ, ಕಳೆ ಗಿಡ ಬೆಳೆದಿದ್ದ ನೆಲೆಗಳು ಪುನಃ ನೀರಿನ ಮೂಲಗಳಾಗಿ ಬದಲಾಗಿವೆ. ದಾಖಲೆಯಲ್ಲಿ ಹೂಳೆತ್ತುವ ಸರ್ಕಾರಿ ಕಾಮಗಾರಿಯಾಗದೆ, ಇವುಗಳೆಲ್ಲ ಜನರ ಭಾಗವಹಿಸುವಿಕೆ ಹಾಗೂ ಭವಿಷ್ಯದ ನಿರ್ವಹಣಾ ತಂತ್ರಗಳಿಂದ ಯಶಸ್ಸು ಪಡೆದಿವೆ. ನಂಬಿಕೆಯ ನಾಯಕತ್ವ ಇದ್ದರೆ ನೀರಿನ ಕೆಲಸಕ್ಕೆ ಎಲ್ಲರೂ ಸೈ ಎಂಬುದು ಎಲ್ಲೆಡೆ ಸಾಬೀತಾಗಿದೆ.



ನಂಜವಳ್ಳಿಯ ಹಳೆಯ ಕೆರೆ ಹೂಳು ತೆಗೆದಾಗ ಕಂಡ ದೃಶ್ಯ

ನಲವತ್ತು ವರ್ಷಗಳಿಂದ ಗ್ರಾಮಾಭಿವೃದ್ಧಿಯ ಹಲವು ಆಯಾಮಗಳಲ್ಲಿ 'ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ' ಕೆಲಸ ಮಾಡುತ್ತಿದೆ. ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಎಲ್.ಎಚ್. ಮಂಜುನಾಥ್ ನಾಡಿನ ಕೆರೆ ಕಾಯಕದ ಅನುಭವವುಳ್ಳವರು. ಒಂದು ಕೆರೆಯೆಂದರೆ ಊರಿನ ನೂರಾರು ಜನರ ಜೊತೆಗಿನ ಮಾತುಕತೆ. ಹಿರಿಯರು, ಮಹಿಳೆಯರು, ಮಕ್ಕಳು, ಕೃಷಿಕರು, ಕುಶಲಕರ್ಮಿಗಳು, ಮೀನುಗಾರರು, ಕುರಿಗಾಹಿಗಳು ಸೇರಿದಂತೆ ಕೆರೆ ಸರಹದ್ದಿನ ಹಲವರು ಸಭೆಗಳಲ್ಲಿ ಭಾಗವಹಿಸುತ್ತಾರೆ. ಇವರೆಲ್ಲರು ಹೇಳುವ ಮಳೆ–ಬೆಳೆಯ ಕಥನಗಳಿಗೆ ಇವರು ಕಿವಿಯಾದವರು. 'ಬಡವರ ಸಮಸ್ಯೆ ಇವರ ಜೊತೆಗೆ ಕೆಲಸ ಮಾಡುತ್ತಾ ನಮಗೆ ಅರ್ಥವಾಗುತ್ತಿದೆ. ರಾಜ್ಯವ್ಯಾಪಿ ಕೆರೆ ಕೆಲಸ ಮಾಡುವ ಆರಂಭದಲ್ಲಿ ನಮಗೆ ನೀರಿನ ಸಮಸ್ಯೆ ಮಾತ್ರ ದೊಡ್ಡದಾಗಿ ಕಾಣುತ್ತಿತ್ತು. ಈಗ ಐದು ವರ್ಷಗಳಲ್ಲಿ ಕೆರೆ ನಿರ್ಮಾಣ, ನಿರ್ವಹಣೆಯ ಸಮಸ್ಯೆಗಳ ಹೆಚ್ಚಿನ ಅರಿವಾಗಿದೆ. ಕೆಲಸದ ಜೊತೆಗೆ ಜ್ಞಾನ ಬೆಳೆದಿದೆ. ಯೋಜನೆಯ ಕಾರ್ಯವನ್ನು ಕಾಲ ಕಾಲಕ್ಕೆ ಪರಾಮರ್ಶಿಸುತ್ತ ಸೂಕ್ತ ಸೇರ್ಪಡೆ ಮಾಡುತ್ತಾ ಸಾಗಿದ್ದೇವೆ. ಸಂಸ್ಥೆಯ ಅಧ್ಯಕ್ಷರಾದ ಡಾ. ವೀರೇಂದ್ರ ಹೆಗ್ಗಡೆಯವರ ನಿರಂತರ ಮಾರ್ಗದರ್ಶನದಿಂದ ಇದು ಸಾಧ್ಯವಾಗಿದೆಯೆಂದು ಮಂಜುನಾಥ್ ಹೇಳುತ್ತಾರೆ. 'ನಮ್ಮೂರು ನಮ್ಮ ಕೆರೆ' ಕಾರ್ಯಕರ್ತರಿಗಾಗಿ ಇವರು ರೂಪಿಸಿದ ಮಾಹಿತಿ ಪುಸ್ತಕ ಯೋಜನೆಯ ಶಿಸ್ತು, ನಿಖರ ಹೆಜ್ಜೆಗೆ ಉತ್ತಮ ನಿದರ್ಶನವಾಗಿದೆ.

ಇಂದು 363 ಕೆರೆಗಳ ಹೂಳೆತ್ತಿದ ಧರ್ಮಸ್ಥಳ ಸಂಸ್ಥೆ ಮುಂದಿನ ವರ್ಷ ಇನ್ನಷ್ಟು ಕೆಲಸ ಕೈಗೊಂಡರೆ ಅದು ಸಾವಿರವೂ ಆದೀತು. ಪ್ರಶ್ನೆ ಅದಲ್ಲ; ಸಾವಿರ ಸಾವಿರ ಕೆರೆಗಳ ನಮ್ಮ ನಾಡಿನಲ್ಲಿ ಇವುಗಳಿಗೆ ಮರುಜೀವ ನೀಡಲು ನಾವು ಕೂಡಾ ಎಚ್ಚರಾಗಬೇಕಲ್ಲವೇ?

ಪ್ರತಿ ದಿನ ಪ್ರತಿ ಗುಟುಕು ನೀರು ಕುಡಿಯುವಾಗ ಕೆರೆ ನೆನಪಾಗಬೇಕು, ಅದರ ಸಂರಕ್ಷಣೆಗೆ ಏನು ಮಾಡಬಹುದೆಂದು ಯೋಚಿಸಬೇಕು. ಕೆರೆ ಕಾಯಕದ ಉತ್ತಮ ನಿರ್ಧಾರ ಕೈಗೊಂಡ ಧರ್ಮಸ್ಥಳ ಸಂಸ್ಥೆಯ ಜೊತೆಗೆ ಎಷ್ಟೊಂದು ಹಳ್ಳಿಗರು ಅನಾಮಿಕರಾಗಿ ತನು ಮನ ಧನ ನೀಡಿದ್ದಾರೆ. ಊರ ಒಳ್ಳೆಯದಕ್ಕೆ ಜೊತೆಯಾಗಿ ಕಾರ್ಯ ಸಾಧ್ಯತೆ ಬಿಂಬಿಸಿದ್ದಾರೆ. ಈಗ ನೀರು ನಿಂತ ಒಂದೊಂದು ಕೆರೆಯ ಸುತ್ತ ನೋಡುತ್ತ ನಿಂತರೆ ಗ್ರಾಮದ ಹಸಿವು, ಬಡತನ, ಹಸಿರಿನ ಹಿಂದಿನ ಶಕ್ತಿ ನೀರೇ ಎಂಬುದು ನಿಚ್ಚಳವಾಗುತ್ತದೆ. ಮಾತಿನಾಚೆಗೆ ಮಣ್ಣಿಗಿಳಿಯುವ ಪರಿಸರ ಪ್ರಜ್ಞೆ ಬಲಿಯಲು ಇಷ್ಟು ಪ್ರೇರಣೆ ಸಾಕಾಗದೆ?

ಪ್ರತಿಕ್ರಿಯಿಸಿ: feedback@sudha.co.in



ಎರೆ ಮಣ್ಣಿನ ಸೀಮೆಯ ಕೆರೆ ಒಮ್ಮೆ ಭರ್ತಿಯಾದರೆ ಎರಡು ಮೂರು ವರ್ಷ ಕುಡಿಯುವ ನೀರಿಗೆ ಸಮಸ್ಯೆ ಇಲ್ಲ.